ಪ್ರದೇಶವನ್ನು ಅರಣ್ಯಪ್ರದೇಶವಾಗಿ ಉಳಿಸಿಕೊಂಡು ಸ್ಮಶಾನಕ್ಕೆ ಬೇರೆ ಜಾಗವನ್ನು ಕೊಡಬೇಕೆಂದು ತಮ್ಮ ಮೂಲಕ ಸರಕಾರವನ್ನು ಒತ್ತಾಯಪಡಿಸುತ್ತಿದ್ದೇನೆ.

ಅಧ್ಯಕ್ಷರು:- ರಿಪೋರ್ಟ್ ತರಿಸಿಕೊಂಡು ಅಲ್ಲಿ ಬೇರೆ ಜಾಗವಿದ್ದರೆ ಅದನ್ನು ಕೊಟ್ಟು ಅರಣ್ಯವನ್ನು ಉಳಿಸಿಕೊಳ್ಳಲು ಕ್ರಮ ಜರುಗಿಸಿ.

ಶ್ರೀ ಹೆಚ್.ಜಿ. ಗೋವಿಂದೇಗೌಡ:- ಈ ಬಗ್ಗೆ ಸರಕಾರದವರು ಸೂಕ್ತ ಕಾರ್ಯಕ್ರಮವನ್ನು ಕೈಗೊಳ್ಳುತ್ತಾರೆ ಎಂದು ಹೇಳಬಯಸುತ್ತೇನೆ.

ವಿಷಯ:- ಕ.ರಾ.ರ.ಸಾ. ಸಂಸ್ಥೆಯಲ್ಲಿ ನೌಕರರ ಕೊರತೆ.

294 (1823) **ಶ್ರೀ ಡಿ.ವಿ. ಸದಾನಂದ ಗೌಡ (ಪುತ್ತೂರು):-** ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಪ್ರಸ್ತುತ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಡಿಪೋದಲ್ಲಿ 'ಕಂಡಕ್ಟರ್, ಡ್ರೈವರ್ ಹಾಗೂ ಮೆಕ್ಯಾನಿಕ್‌ಗಳ' ಕೊರತೆ ಇರುವುದು ನಿಜವೇ ಹಾಗೂ ಇದರಿಂದಾಗಿ ಸಾಕಷ್ಟು ಬಸ್ಸುಗಳ ಓಡಾಟ ಸ್ಥಗಿತಗೊಂಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಇದನ್ನು ಯಾವಾಗ ಸುಧಾರಿಸಲಾಗುವುದು.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಸಾರಿಗೆ ಸಚಿವರು):-

ಅ) ಪ್ರಸ್ತುತ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಡಿಪೋಗಳನ್ನೊಳಗೊಂಡಂತೆ ಚಾಲಕ: ನಿರ್ವಾಹಕ: ಮೆಕ್ಯಾನಿಕ್ ಹುದ್ದೆಗಳ ಖಾಲಿ ಇರುವ ವಿವರ ಈ ರೀತಿ ಇದೆ.

ಚಾಲಕ	:	0229 ಹುದ್ದೆಗಳು
ನಿರ್ವಾಹಕ	:	1335 ಹುದ್ದೆಗಳು
ಮೆಕ್ಯಾನಿಕ್	:	2189 ಹುದ್ದೆಗಳು
		3753 ಹುದ್ದೆಗಳು

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಪದವ್ಯಂದ ಮತ್ತು ನೇಮಕಾತಿ ನಿಯಮಾವಳಿಗಳು 1982ರ ಪ್ರಕಾರ ಮೇಲೆ ಸೂಚಿಸಿರುವಂತೆ ಒಟ್ಟು 3753 ಖಾಲಿ ಇರುವ ಚಾಲಕ, ನಿರ್ವಾಹಕ ಮತ್ತು ಮೆಕ್ಯಾನಿಕ್ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ತುಂಬಲು ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ. ಇದರಿಂದಾಗಿ ಬಸ್ಸುಗಳ ಓಡಾಟ ಸ್ಥಗಿತಗೊಂಡಿರುವುದಿಲ್ಲ.

ಆ) ಖಾಲಿ ಇರುವ ಚಾಲಕ, ನಿರ್ವಾಹಕ ಹುದ್ದೆಗಳಿಂದ ಅನುಸೂಚಿಗಳು ರದ್ದಾಗುವುದನ್ನು ತಪ್ಪಿಸಲು ತಾತ್ಕಾಲಿಕ ನೇಮಕಾತಿ ಆಶ್ರಯದಲ್ಲಿ ತಾತ್ಕಾಲಿಕವಾಗಿ ಚಾಲಕ: ನಿರ್ವಾಹಕರನ್ನು ಹಾಗೂ ಖಾಲಿ ಇರುವ ಮೆಕ್ಯಾನಿಕ್ ಹುದ್ದೆಗಳ ವಿರುದ್ಧ ಶಿಶಿಕ್ಷುಗಳನ್ನು ತರಬೇತಿಯ ಮೇಲೆ ನಿಯೋಜಿಸಲಾಗಿದೆ.

ಶ್ರೀ ಡಿ.ವಿ. ಸದಾನಂದಗೌಡ:- ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಉತ್ತರಗಳನ್ನು ಒದಗಿಸಿದ್ದಾರೆ. ತಾವುಗಳು ಫೋನ್ ಮಾಡದೇ ನಾನು ನೀವು ಜೊತೆಯಲ್ಲಿ ಹೋದರೆ ಬೆಂಗಳೂರು ಡಿಪೋದಲ್ಲಿಯೇ 10-15 ಬಸ್‌ಗಳಿಗೆ ಕಂಡಕ್ಟರ್ ಇಲ್ಲ, ಡ್ರೈವರ್ ಇಲ್ಲವೆಂದು ಉಳಿದುಕೊಂಡಿರುತ್ತವೆ. ಪುತ್ತೂರಿನಲ್ಲಿ ಸುಮಾರು 22 ಹುದ್ದೆಗಳು ಖಾಲಿ ಇವೆ ಎಂದು ತಿಳಿದು ಬಂದಿದೆ. ಕರ್ನಾಟಕ ರಾಜ್ಯ ಸಾರಿಗೆ ಸಂಸ್ಥೆಯ ಪದವ್ಯೂದ ಮತ್ತು ನೇಮಕಾತಿ ನಿಯಮಾವಳಿಗಳು 1982ರ ಪ್ರಕಾರ ಮೇಲೆ ಸೂಚಿಸಿದಂತೆ ಒಟ್ಟು 3753 ಖಾಲಿ ಇರುವ ಚಾಲಕ, ನಿರ್ವಾಹಕ ಮತ್ತು ಮೆಕಾನಿಕ್ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ತುಂಬಲು ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ, ಇದರಿಂದ ಬಸ್‌ಗಳ ಓಡಾಟ ಸ್ಥಗಿತಗೊಂಡಿಲ್ಲವೆಂದು ಹೇಳಿದ್ದೀರಿ.

ನಾನು ತಮ್ಮಲ್ಲಿ ಕೇಳುವುದೇನೆಂದರೆ, ಈ ಕೊನೆಯ ನೇಮಕಾತಿಯನ್ನು ಯಾವಾಗ ಮಾಡಲಾಗಿದೆ? ಚಾಲಕ, ನಿರ್ವಾಹಕರ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗಿದೆ ಮತ್ತು ಯಾವ ಆಧಾರ ಮತ್ತು ಮಾನದಂಡವನ್ನು ಇದಕ್ಕೆ ಉಪಯೋಗ ಮಾಡಿಕೊಳ್ಳಲಾಗಿದೆ? ನಮಗೆ ತಿಳಿದಿರುವ ಹಾಗೆ, ಕೆಲಸದಲ್ಲಿರುವಾಗ ಒಬ್ಬ ನೌಕರ ಸತ್ತರೆ ಅವರ ಹತ್ತಿರದ ಬಂಧುಗಳಿಗೆ ಕೆಲಸವನ್ನು ಕೊಡುವ ಬಗ್ಗೆ ನಿಯಮಾವಳಿಗಳು ಇನ್ನೂ ಕೂಡ ಆಗದ ಕಾರಣ ಸತ್ತವ್ಯಕ್ತಿಗಳಿಂದ ಖಾಲಿ ಇರುವ ಜಾಗಗಳನ್ನು ಹಾಗೂ ನಿವೃತ್ತಿ ಹೊಂದಿ ಖಾಲಿ ಇರುವ ಜಾಗಗಳನ್ನು ಹೇಗೆ ಭರ್ತಿ ಮಾಡಿದ್ದೀರಿ?

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಮಾನ್ಯ ಅಧ್ಯಕ್ಷರೇ, ಕೆ.ಎಸ್.ಆರ್.ಟಿ.ಸಿ.ಯಲ್ಲಿ ಚಾಲಕರನ್ನು, ನಿರ್ವಾಹಕರನ್ನು ಮತ್ತು ಮೆಕಾನಿಕ್‌ಗಳನ್ನು ನೇಮಕಾತಿ ಮಾಡಿಕೊಳ್ಳಲು ಕೆ.ಎಸ್.ಆರ್.ಟಿ.ಸಿ.ಯ ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸ್‌ಗಳು ಇವೆ. ಅದರ ಪ್ರಕಾರವಾಗಿಯೇ ಖಾಲಿ ಇರುವ ಹುದ್ದೆಗಳನ್ನು ತುಂಬುತ್ತಾರೆ. ಖಾಲಿ ಹುದ್ದೆಗಳನ್ನು ತುಂಬುವ ವಿಚಾರದಲ್ಲಿ 1992ರಲ್ಲಿ ಸರಕಾರದವರು ವಿಧಿಸಿದ್ದ ನಿರ್ಬಂದ ಪ್ರಕಾರ ಆಗಲಿಲ್ಲ. ಈಗ ಅದನ್ನು ತೆಗೆದು ಹಾಕಿದ್ದು ಸೂಕ್ತ ಕ್ರಮ ತೆಗೆದುಕೊಳ್ಳಲು ಸೂಚಿಸಲಾಗಿದೆ. ಡ್ರೈವರ್, ಕಂಡಕ್ಟರ್ ಹಾಗೂ ಮೆಕಾನಿಕ್ ಹುದ್ದೆಗಳು ಖಾಲಿ ಇರುವುದು ನಿಜ. ಅವುಗಳಿಲ್ಲವನ್ನೂ 19 ಡಿವಿಜನ್‌ಗಳಲ್ಲಿಯೂ ನೋಡಿಕೊಂಡು ಸೂಕ್ತ ಕ್ರಮ ಜರುಗಿಸಲು ಕ್ರಮ ತೆಗೆದುಕೊಳ್ಳುತ್ತೇವೆ.

ಇನ್ನು 6 ತಿಂಗಳೊಳಗೆ ಕೆ.ಎಸ್.ಆರ್.ಟಿ.ಸಿ.ಯಲ್ಲಿ ಯಾವ ಸ್ಯಾಂಕ್ಷನ್ಡ್ ಪೋಸ್ಟ್ ಸಹ ವೇಕೆಂಟ್ ಇರುವುದಿಲ್ಲ ಎನ್ನುವುದನ್ನು ನಾನು ಖಚಿತವಾಗಿ ಹೇಳುತ್ತಿದ್ದೇನೆ. ಎರಡನೆಯದಾಗಿ ಕೆ.ಎಸ್.ಆರ್.ಟಿ.ಸಿ.ಯಲ್ಲಿನ ನೌಕರರು ಸತ್ತಾಗ ಅವರ ಕುಟುಂಬ ವರ್ಗದವರಿಗೆ ಕಂಪ್ಯಾಷನೇಟ್ ಗ್ರೌಂಡ್ಸ್ ಮೇಲೆ ಕೆಲಸ ಕೊಡತಕ್ಕಂತಹ ಅವಕಾಶ ಏನಿದೆ ಅದರ ವಿಚಾರದಲ್ಲಿ ಸರಕಾರ ಅಂದರೆ ಡಿ.ಪಿ.ಎ.ಆರ್.ನವರು ನಿಯಮಾವಳಿಗಳನ್ನು ಮಾಡುತ್ತಿರುವುದರಿಂದ ಇದು ತಡವಾಗಿರುವುದು ನಿಜ. ಆ ರೀತಿ ಸುಮಾರು ಕೆಲವು ನೂರು ನೌಕರರ ಕುಟುಂಬಗಳಿಗೆ ತೊಂದರೆಯಾಗಿರುವುದು ನಿಜ. ಡಿ.ಪಿ.ಎ.ಆರ್.ನವರು ಕಾನೂನುಗಳನ್ನು ಮಾಡಿದ ತಕ್ಷಣವೇ ಅವರಿಗೂ ಸಹ ಕೆಲಸಗಳನ್ನು ಕೊಡಲಾಗುವುದು. ಆ

ನಿಯಮಾವಳಿಗಳನ್ನು ಮಾಡುವುದಕ್ಕೆ ತಡವಾಗಿರುವುದು ಕೋರ್ಟಿನ ಒಂದು ವಿಚಾರದಲ್ಲಿ, ಕೋರ್ಟಿನಲ್ಲಿ ಅದಕ್ಕೆ ತಡೆಯಾಜ್ಞೆ ಇರುವುದರಿಂದ ಎಂದು ಹೇಳುತ್ತಿದ್ದೇನೆ. ಮಾನ್ಯ ಸದಸ್ಯರು ಹೇಳಿದಂತೆ ಪುತ್ತೂರು, ಬೆಂಗಳೂರಿನಲ್ಲಿ ಅಷ್ಟೇ ಅಲ್ಲ, ಎಲ್ಲಾ 105 ಡಿಪೋಗಳಲ್ಲೂ ಇವತ್ತು ಈ ವೇಕೆನ್ಸಿಗಳು ಇರುವುದು ನಿಜ. ಇನ್ನು 6 ತಿಂಗಳಲ್ಲಿ ಎಲ್ಲಾ ವೇಕೆನ್ಸಿಗಳನ್ನು ಫಿಲಪ್ ಮಾಡಲಾಗುತ್ತದೆ.

ಶ್ರೀ ಡಿ.ವಿ. ಸದಾನಂದ ಗೌಡ:- ಇನ್ನು 2-3 ತಿಂಗಳಲ್ಲಿ ಸರಿ ಮಾಡುತ್ತೀರಿ ಎಂಬ ಬಗ್ಗೆ ನಮಗೆ ತಮ್ಮ ಮೇಲೆ ವಿಶ್ವಾಸ ಇದೆ. ಈಗ ಕೆ.ಎಸ್.ಆರ್.ಟಿ.ಸಿ ನೈಟ್ ಸರ್ವೀಸ್‌ಗಳೀನು ಇವೆ ಆದರಲ್ಲಿ ತಾವೇಕೆ ಕಂಡಕ್ಟರ್‌ಗಳನ್ನು ಹಾಕುವುದಿಲ್ಲ, ಬರೀ ಡ್ರೈವರ್‌ಗಳು ಮಾತ್ರ ಇರುತ್ತಾರೆ. ಮೊನ್ನೆ ಕುಂಬ್ಳೆ ಸುಂದರರಾಯರು ಅರ್ಧದಲ್ಲಿ ಕುಣಿಗಲ್‌ನಲ್ಲಿ ಸಿಕ್ಕಿ ಬಿದ್ದಿದ್ದರು. ಮೊನ್ನೆ ಅಂಗಾರ್‌ರವರು ಕೂಡ ಅರ್ಧದಲ್ಲಿ ಸಿಕ್ಕಿ ಬಿದ್ದಿದ್ದರು. ಕೇವಲ ಕಂಡಕ್ಟರ್ ಇಲ್ಲದೇ ಬರೀ ಚಾಲಕ ಇರುವಂತಹ ಸಂದರ್ಭದಲ್ಲಿ ವಾಹನ ಕೆಟ್ಟರೆ ಆದರ ರಿಪೇರಿಗೆ ಆಕ್ಕಪಕ್ಕದಲ್ಲಿ ಬದಲಿ ವ್ಯವಸ್ಥೆ ಮಾಡುವುದಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ ಇದನ್ನೇನಾದರೂ ತುಂಬಲಿಕ್ಕೆ ವ್ಯವಸ್ಥೆ ಮಾಡುತ್ತೀರೋ?

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಕೆ.ಎಸ್.ಆರ್.ಟಿ.ಸಿ.ಯ ಕಾಸ್ಟ್ ಆಫ್ ಆಪರೇಷನ್ ಅನ್ನು ಕಡಿಮೆ ಮಾಡಬೇಕೆಂದು ಕಂಡಕ್ಟರ್ ಇಲ್ಲದೆ ಬಸ್‌ಗಳನ್ನು ಓಡಿಸಬೇಕೆಂಬುದು ಇರತಕ್ಕಂತಹ ವಿಚಾರ. ಆದ್ದರಿಂದ ಮತ್ತೆ ಕಂಡಕ್ಟರ್‌ಗಳನ್ನು ಎಲ್ಲಾ ರೂಟುಗಳಲ್ಲಿ ಹಾಕಬೇಕೆಂಬ ವಿಚಾರ ನಮ್ಮ ಮುಂದೆ ಇಲ್ಲ. ಆದ್ದರಿಂದ ಎಲ್ಲಿ ಅವಶ್ಯಕತೆ ಇದೆ ಅಲ್ಲಿ ಹಾಕಿಸುತ್ತೇವೆ. ಕಾಸ್ಟ್ ಆಫ್ ಆಪರೇಷನ್‌ಅನ್ನು ಕಡಿಮೆ ಮಾಡಬೇಕಾಗಿದೆ. ಅರ್ನಿಂಗ್ಸ್ ಜಾಸ್ತಿ ಮಾಡಬೇಕಾಗಿದೆ.

ಶ್ರೀ ಡಿ.ವಿ. ಸದಾನಂದ ಗೌಡ:- ನೈಟ್ ಸರ್ವೀಸ್‌ಗಳಿಗೆ ಒಳ್ಳೆಯ ಕಂಡೀಷನ್ ಇರುವ ಬಸ್‌ಗಳನ್ನು ಹಾಕಬೇಕು ಎನ್ನುವುದು ನಮ್ಮ ವಿನಂತಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಇಂದು ನಾನು ಇಲ್ಲಿ ವಚನ ಕೊಡುತ್ತಿದ್ದೇನೆ. ಇನ್ನು 6 ತಿಂಗಳೊಳಗೆ ಕರ್ನಾಟಕದಲ್ಲಿ ಲಕ್ಸುರಿ, ಸೆಮಿಲಕ್ಸುರಿ ಬಸ್‌ಗಳು ಮೂರುವರೆ ಲಕ್ಷ ಕಿಲೋಮೀಟರ್‌ಗಿಂತಲೂ ಹೆಚ್ಚು ಓಡಾಡಿ ಸ್ಕ್ರಾಪ್ ಆಗಬೇಕಾಗಿರತಕ್ಕಂಥಾ ಬಸ್‌ಗಳು 400ಕ್ಕೂ ಹೆಚ್ಚು ಇದೆ. ಆ ಎಲ್ಲಾ ಬಸ್‌ಗಳನ್ನು 6 ತಿಂಗಳೊಳಗೆ ರೀಪ್ಲೇಸ್ ಮಾಡಿಸುತ್ತೇವೆ.

ವಿಷಯ:- ಕೋಲಾರ ಜಿಲ್ಲೆ ಮೂಲಕ ತಾಲ್ಲೂಕು ಆಶ್ರಯ ಯೋಜನೆ ನಿವೇಶನಗಳು.

296 (325) **ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ):-** ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೋಲಾರ ಜಿಲ್ಲೆ ಮಾಲೂರು ತಾಲ್ಲೂಕಿಲ್ಲಿ ಕರಿನಾಯಕನ ಹಳ್ಳಿ ಗ್ರಾಮದ ಸರ್ವೆ ನಂ. 44ರ ಸರ್ಕಾರಿ ಗುಂಡುತೋಪಾದ 4-31 ಗುಂಟೆ ಜಮೀನನ್ನು ಆಶ್ರಯ ಯೋಜನೆಯಡಿ ಎಷ್ಟು ನಿವೇಶನಗಳನ್ನಾಗಿ ವಿಂಗಡಿಸಿ ಹಂಚಲಾಗಿದೆ?